"ನೀಲಾಂಬಿಕಾದೇವಿ ಮನಸ್ಸು ಮಾಡಿದರೆ ಆದೀತು. ಅವಳೊಂದು ಮಾತು ಹೇಳಿದರೆ ಮಹಾರಾಜ ದೊಡ್ಡ ವೀರಪ್ಪ ದೊರೆಗಳು ಇಲ್ಲವೆನ್ನಲಾರರು ಎಂದೆ."

"ಪಟ್ಟಕ್ಕೆ ಇಬ್ಬರು ರಾಣಿಯರಿರಲು ಸಾಧ್ಯವೆ?"

"ಇಲ್ಲ ಸಾಧ್ಯವಿಲ್ಲ."

"ಸರಿ. ನೀವೀಗ ಮಲಗಿ ನಿದ್ದೆ ಮಾಡಿ. ಮಹಾದೇವ ಪರಿಹಾರ ಸೂಚಿಸುತ್ತಾನೆ."

ಮರುದಿನ ಅರಮನೆ ಎದುರಿನ ಕೊಳದಲ್ಲಿ ನೀಲಾಂಬಿಕಾದೇವಿಯ ದೇಹ ತೇಲುತ್ತಿತ್ತು.

ಅಪ್ಪಾಜಿರಾಜ ಎಲ್ಲವನ್ನೂ ಹೇಳಿ ನಿಟ್ಟಿಸಿರು ಬಿಟ್ಟ.

"ಇದು ನಿಜವಾಗಿ ನಡೆದ ಘಟನೆ. ಈಗಲೂ ನ್ಯಾಯಪೀಠ ನನ್ನನ್ನು ಅಪರಾಧಿಯೆಂದು ಭಾವಿಸುತ್ತದೆ ಎಂದಾದರೆ ಯಾವ ಶಿಕ್ಷೆಯನ್ನು ನೀಡಿದರೂ ಅನುಭವಿಸಲು ಸಿದ್ಧನಿದ್ದೇನೆ."

ಆಸ್ಥಾನದಲ್ಲಿ ನೀರವ ಮೌನ.

ತುಂಬಾ ಹೊತ್ತು ಯೋಚಿಸಿ ದೊಡ್ಡ ವೀರಪ್ಪ ದೊರೆ ತೀರ್ಪು ನೀಡಿದ.

"ನೀಲಾಂಬಿಕಾ ದೇವಿ ತುಂಬಾ ಸೂಕ್ಷ್ಮ ಮನಸ್ಸಿನವಳು. ಪಟ್ಟದ ರಾಣಿಯಾಗಿ ತಾನಿರುವಾಗ ಇನ್ನೊಬ್ಬಾಕೆಯನ್ನು ಪಟ್ಟದ ರಾಣಿಯನ್ನಾಗಿಸಲು ಮಹಾರಾಜರು ಒಪ್ಪಲಾರರು ಎಂದು ಅವಳು ಭಾವಿಸಿರಬೇಕು. ಪತಿಯ ಸುಖಕ್ಕೆ ತಾನು ಅಡ್ಡಿಯಾಗುತ್ತಿದ್ದೇನೆ ಎಂಬ ಭಾವ ಪ್ರಾಣ ತ್ಯಾಗಕ್ಕೆ ಅವಳನ್ನು ಪ್ರೇರೇಪಿಸಿದೆ. ಯುವರಾಜರು ಕಾವೇರಿಯನ್ನು ಇಟ್ಟುಕೊಳ್ಳುವ ಬದಲು ಶಾಸ್ತ್ರೋಕ್ತವಾಗಿ ವಿವಾಹವಾಗುತ್ತಿದ್ದರೆ ಅವಳನ್ನು ಅಭದ್ರತೆಯ ಭಾವ ಕಾಡುತ್ತಿರಲಿಲ್ಲ. ನೀಲಾಂಬಿಕಾದೇವಿ ಹೀಗೆ ಕೆರೆಗೆ ಹಾರಿ ಪ್ರಾಣ ಕಳಕೊಳ್ಳಬೇಕಾದ ಪ್ರಮೇಯ ಮೂಡುತ್ತಿರಲಿಲ್ಲ. ಯಾವ ರೀತಿಯಿಂದ ನೋಡಿದರೂ ನೀಲಾಂಬಿಕಾ ದೇವಿಯ ಆತ್ಮಹತ್ಯೆಗೆ ಯುವರಾಜರೇ ಕಾರಣರೆಂದು ಸ್ಪಷ್ಟವಾಗಿ ಕಾಣಿಸುತ್ತಿದೆ. ಯುವರಾಜರು ತಪ್ಪು ಮಾಡಿದ್ದಾರೆ. ಅವರಿಗೆ ಆಜೀವ ಪರ್ಯಂತ ಕಾರಾಗೃಹವಾಸದ ಶಿಕ್ಷೆಯನ್ನು ಈ ನ್ಯಾಯಪೀಠ ನೀಡುತ್ತದೆ."

ಮಹಾರಾಜ ತೀರ್ಪು ನೀಡಿ ಎದ್ದು ನಿಂತು ಹಣೆಯನ್ನು ಬಲಗೈಯಿಂದ ಅದುಮಿಕೊಂಡು ಬೀಳುವಂತಾದ ಅವನನ್ನು ಇಬ್ಬರು ಅಂಗರಕ್ಷಕರು ಎರಡು ಕಡೆಗಳಿಂದ ಆಧರಿಸಿ ಹಿಡಿದುಕೊಂಡು ಒಳ ನಡೆದರು.

## ಪ್ರಭಾಕರ ಶಿಶಿಲ

ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ. ಇದುವರೆಗೆ 42 ಸಾಹಿತ್ಯ ಕೃತಿಗಳನ್ನು ಬರೆದಿದ್ದಾರೆ. ಮಹಾಭಾರತವನ್ನು ಆಧಾರಿಸಿ ಇವರು ರಚಿಸಿದ 'ಪುಂಸ್ತ್ರೀ' ಒಟ್ಟು 12 ಭಾಷೆಗಳಿಗೆ ಅನುವಾದಗೊಳ್ಳುತ್ತಿದೆ. ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಶಿಶಿಲರು ರಚಿಸಿರುವ 160 ಕೃತಿಗಳು ಭಾರತದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಅವಲೋಕನ ಕೃತಿಗಳಾಗಿವೆ.